334 (630) ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ ಕ್ಷೇತ್ರ):– ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೂರ್ವ ವಲಯದಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಐಜಿಪಿಯವರು ಎಷ್ಟು ಅವಧಿಯಿಂದ ಇದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ಇದು ದೀರ್ಘಕಾಲದ ಅವಧಿಯೇ?

ಇ) ಹೌದಾದಲ್ಲಿ ಇದಕ್ಕೆ ಕಾರಣವೇನು?

ಈ) ಇವರ ಅಧಿಕಾರ ಅವಧಿಯಲ್ಲಿ ನಡೆದಿರುವ ಕೋಮು–ಗಲಭೆಗಳೆಷ್ಟು, ವಿವರಗಳನ್ನು ಕೊಡುವುದು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):

ಅ) ಪೂರ್ವ ವಲಯದಲ್ಲಿ (ದಾವಣಗೆರೆ) ಐಜಿಪಿಯಾಗಿ ಶ್ರೀ ಜಿ.ಎಂ. ಹಯಾತ್, ಐಪಿಎಸ್, ರವರು ದಿ:23–11–2001ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಶ್ರೀ ಜಿ.ಎಂ. ಹಯಾತ್, ಐಪಿಎಸ್, ರವರು ಪೂರ್ವ ವಲಯದಲ್ಲಿ (ದಾವಣಗೆರೆ) ಐಜಿಪಿಯಾಗಿ 3 ವರ್ಷ, 2 ತಿಂಗಳು ಕಳೆದಿರುವುದರಿಂದ ಇದು ದೀರ್ಘಕಾಲದ ಅವಧಿಯಲ್ಲ.

ಇ) ಪ್ರಶ್ನೆ ಅ ಗೆ ನೀಡಿದ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ)

ಜಿಲ್ಲೆಗಳು	ವರ್ಷ			
	2002	2003	2004	2005
ಬಳ್ಳಾರಿ	ಇಲ್ಲ	ಇಲ್ಲ	ಇಲ್ಲ	ಇಲ್ಲ
ಚಿತ್ರದುರ್ಗ	ಇಲ್ಲ	ಇಲ್ಲ	ಇಲ್ಲ	ಇಲ್ಲ
ಶಿವಮೊಗ್ಗ	ಇಲ್ಲ	01	01	ಇಲ್ಲ
ದಾವಣಗೆರೆ	02	01	01	ಇಲ್ಲ

335 (631) ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ):– ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟುಸ ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನ ಸವಳಂಗ ಕಾಯಕ ಕೆರೆಯ ಕಾಮಗಾರಿಗಳು ಯಾವ ಸಾಲಿನಲ್ಲಿ ನಡೆದಿದೆ;

ಆ) ಈ ಕಾಮಗಾರಿಗಳನ್ನು ಯಾರು ಉದ್ಘಾಟಿಸಿದರು ಹಾಗೂ ಅದಕ್ಕೆ ಖರ್ಚಾದ ಹಣ ಎಷ್ಟು;

ಇ) ಈ ಕಾಮಗಾರಿಗಳಿಗೆ ಸರ್ಕಾರದಿಂದ ಮಂಜೂರಾದ ಹಣ ಎಷ್ಟು;

ಈ) ಎಷ್ಟು ಹಣ ಬಿಡುಗಡೆಯಾಗಿದೆ; ಕೆರೆಯಲ್ಲಿ ಎಷ್ಟು ಪ್ರಮಾಣದ ಹೂಳು ಎತ್ತಿದ್ದಾರೆ;

ಉ) ಮಂಜೂರಾದ ಹಣದಲ್ಲಿ ಬಿಡುಗಡೆಯಾಗದ ಮೊತ್ತವೆಷ್ಟು;

ಊ) ಮುಂದಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಸದರಿ ಕಾಮಗಾರಿಯು 2001–2002 ಮತ್ತು 2002–2003ನೇ ಸಾಲಿನಲ್ಲಿ ನಡೆದಿದೆ.

ಆ) ರೈತಕಾಯಕ ಕೆರೆ ಕಾರ್ಯಕ್ರಮದ ಸಾಂಕೇತಿಕ ಉದ್ಘಾಟನೆಯನ್ನು ಅಂದಿನ ಮುಖ್ಯಮಂತ್ರಿಗಳು ಸವಳಂಗ ಕೆರಯಂಗಳದಲ್ಲಿ ದಿ:30.11.01 ರಂದು ನೆರವೇರಿಸಿದರು. ಈ ಉದ್ಘಾಟನೆ ಕಾರ್ಯಕ್ರಮಕ್ಕೆ ಒಟ್ಟು ರೂ.9.10ಲಕ್ಷ ಖರ್ಚಾಗಿದೆ.

ಇ) ರೂ.50.00ಲಕ್ಷಗಳು

ಈ) ಈ ಕಾಮಗಾರಿಗೆ ಈವರೆಗೆ ರೂ.15.15ಲಕ್ಷ ನಗದು ಹಾಗೂ 157 ಮೆಟ್ರಿಕ್ ಟನ್ ಆಹಾರಧಾನ್ಯ. ಬಿಡುಗಡೆಯಾಗಿದ್ದು (ಮೊತ್ತ ರೂ.9.81 ಲಕ್ಷ) ಒಟ್ಟು 24.96ಲಕ್ಷ ಆಗಿರುತ್ತದೆ. ಕೆರೆಯಲ್ಲಿನ 1,33,400 ಘನ ಮೀ.ನಷ್ಟು ಹೂಳನ್ನು ತೆಗೆಯಲಾಗಿದೆ.

ಉ) ರೂ.25.04ಲಕ್ಷಗಳು

ಊ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕರ್ನಾಟಕ ಭೂಸೇನಾ ನಿಗಮಕ್ಕೆ ವಹಿಸಲಾಗಿದೆ.

337 (420) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು):– ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ ನಿರ್ಮಿಸಿರುವ ಕಿಂಡಿ ಅಣೆಕಟ್ಟುಗಳು ಎಷ್ಟು;

ಆ) ಆ ಅಣೆಕಟ್ಟುಗಳು ಸುಸ್ಥಿತಿಯಲ್ಲಿವೆಯೇ;

ಇ) ಅವುಗಳಲ್ಲಿ ರೈತರು ಉಪಯೋಗಿಸುತ್ತಿರುವ ಕಿಂಡಿ ಅಣೆಕಟ್ಟುಗಳು ಎಷ್ಟು?

ಈ) ಅಣೆಕಟ್ಟುಗಳ ದುರಸ್ಥಿ/ಪುನರ್ ನಿರ್ಮಾಣ ಅಗತ್ಯವಿರುವ ಕಿಂಡಿ ಅಣೆಕಟ್ಟು ಎಷ್ಟು?

ಉ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಊ) ಇವುಗಳ ನೀರಿನ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಹೊಸದಾಗಿ ಕಿಂಡಿ ಅಣೆಕಟ್ಟು ನಿರ್ಮಿಸಲಾಗುವುದೇ?

ಋ) ಈ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಗೆ ನಿಗಧಿ ಪಡಿಸಿದ ಮೊತ್ತ ಎಷ್ಟು? (ಕ್ಷೇತ್ರವಾರು ಮೊತ್ತ ಎಷ್ಟು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ):

ಅ) 33.

ಆ) 27 ಅಣೆಕಟ್ಟುಗಳು ಸುಸ್ಥಿತಿಯಲ್ಲಿವೆ.

ಇ) 25.

ಈ) 17

ಉ) 2003–04ನೇ ಸಾಲಿನಲ್ಲಿ 3 ಕಿಂಡಿ ಅಣೆಕಟ್ಟುಗಳ ದುರಸ್ಥಿಯನ್ನು ಕೈಗೊಳ್ಳಲಾಗಿದ್ದು, ಬಾಕಿ ಕಿಂಡಿ ಅಣೆಕಟ್ಟುಗಳ-ದುರಸ್ಥಿಯನ್ನು ಅನುದಾನ ಲಭ್ಯತೆ ಮೇರೆಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.